# ಜೀವನದಲ್ಲಿ ಕಣ್ಣುಗಳು ಇಲ್ಲದೇ ಹೋದರೆ ಜೀವನ ನಡೆಸುವುದು ಕಷ್ಟ–ನ್ಯಾ॥ಎಂ.ಮಹೇಂದ್ರ

ಜಗಳೂರು.ಏ.5 – ಮನುಷ್ಯನ ದೇಹದಲ್ಲಿ ಯಾವುದಾದರೂ ಅಂಗ ಇಲ್ಲದೇ ಹೋದರು ಜೀವನ ನಡೆಸಬಹುದು. ಆದರೆ ಕಣ್ಣುಗಳು ಇಲ್ಲದೇ ಹೋದರೆ ಜೀವನ ನಡೆಸುವುದು ಕಷ್ಟವಾಗುತ್ತದೆ ಎಂದು ಜೆ.ಎಂ.ಎಫ್.ಸಿ. ನ್ಯಾಯಾಲಯದ ನ್ಯಾಯಾಧೀಶರಾದ ಎಂ.ಮಹೇಂದ್ರ ಅವರು ತಿಳಿಸಿದರು.

ಪಟ್ಟಣದ ಪ್ರೇರಣಾ ಸಮಾಜ ಸೇವಾ ಸಂಸ್ಥೆ ಚರ್ಚ್ ಆವರಣದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ ಮತ್ತು ವಕೀಲರ ಸಂಘ, ಹಿರಿಯ ನಾಗರಿಕರ ಸಂಘ, ಅಲ್ ಫಾತೀಮಾ ಸಂಸ್ಥೆ ಹಾಗೂ ಧ್ಯಾನ ಜ್ಯೋತಿ ಟ್ರಸ್ಟ್ ಮತ್ತು ಎಂ.ಆರ್.ಟಿ.ಗ್ರಾಮಾಂತರ ಕಣ್ಣಿನ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಉಚಿತ ಕಣ್ಣಿನ ತಪಾಸಣೆ ಹಾಗೂ ಶಸ್ತ್ರಚಿಕಿತ್ಸೆ ಶಿಬಿರವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟನೆ ಮಾತನಾಡಿದರು. ಹಿಂದಿನ ಕಾಲದಲ್ಲಿ ಹಿರಿಯರು ಎಷ್ಟು ವಯಸ್ಸಾದರೂ ಕಣ್ಣುಗಳು ಚೆನ್ನಾಗಿ ಕಾಣುತ್ತಿದ್ದವು. ಆದರೆ ಇಂದಿನ ಆಹಾರ ಪದ್ಧತಿಗಳು ಸರಿಯಿಲ್ಲದೇ ಚಿಕ್ಕ ವಯಸ್ಸಿನಲ್ಲಿ ಕಣ್ಣಿನ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇಂತಹ ಶಿಬಿರಗಳನ್ನು ನಡೆಸುವುದರ ಮೂಲಕ ಬಡವರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲ್ಲೂಕು ವೈದ್ಯಾಧಿಕಾರಿ ಡಾ.ನಾಗರಾಜ್, ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯ ಸದಸ್ಯರಾದ ಪಿ.ಎಸ್.ಅರವಿಂದ್, ಪ್ರೇರಣಾ ಸಮಾಜ ಸೇವಾ ಚರ್ಚ್ ಫಾದರ್ ವಿಲಿಯಮ್, ಮೀರಾಂಡ, ಡಾ.ನಾಗರಾಜ್, ವಕೀಲರ ಸಂಘದ ಅಧ್ಯಕ್ಷ ಬಸವರಾಜ್,



ಹಿರಿಯ ವಕೀಲರಾದ ಪರಮೇಶ್ವರಪ್ಪ, ವಕೀಲರಾದ ತಿಪ್ಪೇಸ್ವಾಮಿ, ಹಿರಿಯ ನಾಗರಿಕ ಸಂಘದ ಅಧ್ಯಕ್ಷ ವಿಠಲ್‌ಶ್ರೇಷ್ಠಿ, ಅಲ್‌ಫಾತೀಮ ಸಂಸ್ಥೆ ಕಾರ್ಯದರ್ಶಿ ಶಾಹಿನಾಬೇಗಂ ಸೇರಿದಂತೆ ಇತರೆ ವಕೀಲರು ಮತ್ತು ಸಾರ್ವಜನಿಕರು ಹಾಜರಿದ್ದರು.

# ಡಿ.ಟಿವಿಕರ್ನಾಟಕ ವೆಬ್ ನ್ಯೂಸ್ ಚಾನೆಲ್ ಲೋಗೋ ಮತ್ತು ಪೋಸ್ಟರ್ ಬಿಡುಗಡೆ

ಜಗಳೂರು.ಏ.5– ಪಟ್ಟಣದ ಪ್ರೇರಣಾ ಸಮಾಜ ಚರ್ಚ್ ಆವರಣದಲ್ಲಿ ಡಿ.ಟಿವಿ. ಕರ್ನಾಟಕ ವೆಬ್ ನ್ಯೂಸ್ ಚಾನೆಲ್ ಲೋಗೊ ಮತ್ತು ಪೋಸ್ಟರ್‌ನ್ನು ಜೆ.ಎಂ.ಎಫ್.ಸಿ ಮತ್ತು ಸಿವಿಲ್ ನ್ಯಾಯಾಧೀಶರಾದ ಎಂ. ಮಹೇಂದ್ರ ಹಾಗು ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯ ಸದಸ್ಯರು ಡಾ. ಪಿ.ಎಸ್ ಅರವಿಂದ್ ಬಿಡುಗಡೆ ಮಾಡಿದರು.



ಈ ಸಂದರ್ಭದಲ್ಲಿ ತಾಲ್ಲೂಕು ವೈದ್ಯಾಧಿಕಾರಿ ಡಾ. ನಾಗರಾಜ್, ಡಿ.ಟಿವಿ. ವೆಬ್. ಚಾನೆಲ್ ಸಂಪಾದಕರು ಎಂ.ಡಿ ಅಬ್ದುಲ್ ರಹೀಂ. ಜೆ.ಎಫ್.ಪ್ರೇರಣ ಸಮಾಜ ಸೇವ ಚರ್ಚ್ ಫಾದರ್ ವಿಲಿಯಮ್ ಮೀರಾಂಡ , ಡಾ. ನಾಗರಾಜ್, ವಕೀಲರ ಸಂಘದ ಅಧ್ಯಕ್ಷ ಬಸವರಾಜ್ , ಹಿರಿಯ ವಕೀಲರಾದ ಪರಮೇಶ್ವರಪ್ಪ , ವಕೀಲರಾದ ತಿಪ್ಪೇಸ್ವಾಮಿ, ಹಿರಿಯ ನಾಗರಿಕ ಸಂಘದ ಅಧ್ಯಕ್ಷ ವಿಠ್ಠಲ ಶ್ರೇಷ್ಠಿ , ಅಲ್ ಫಾತೀಮ ಸಮಸ್ಥೆ ಕಾರ್ಯದರ್ಶಿ ಶಾಹಿನಾ ಬೇಗಂ ಸೇರಿದಂತೆ ಇತರೆ ವಕೀಲರ ಮತ್ತು ಸಾರ್ವಜನಿಕರು ಹಾಜರಿದ್ದರು.

# ಮಲೇಬೆನ್ನೂರಿನಲ್ಲಿ ಮುಷ್ಠಿಧಾನ್ಯ ಸಂಗ್ರಹ ಅಭಿಯಾನ

ದಾವಣಗೆರೆ.ಏ.5– ಹರಿಹರ ತಾಲ್ಲೂಕು ಮಲೇಬೆನ್ನೂರಿನಲ್ಲಿ ಹರಿಹರ ತಾಲ್ಲೂಕು ಬಿ.ಜೆ.ಪಿ ಘಟಕದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮುಷ್ಠಿಧಾನ್ಯ ಸಂಗ್ರಹ ಅಭಿಯಾನದಲ್ಲಿ ಸಂಸದರಾದ ಶ್ರೀ ಜಿ.ಎಂ.ಸಿದ್ದೇಶ್ವರ,

KANNADA PRABHA- 1/6/2006

# ಹೂವಿನಹಡಗಲಿಯಲ್ಲಿ ಸಬಲೀಕರಣ ಕಾರ್ಯಾಗಾರ

ಹೂವಿನಹಡಗಲಿ: ನಬಾರ್ಡ್ ಜಲಾನಯನ ನಿಧಿ ನೆರವಿನಡಿಯಲ್ಲಿ ಸಾಂಬಕ್ಕಿಹಳ್ಳಿ, ಸುಂಕಮ್ಮನಹಳ್ಳಿ, ಕುಸುಮ ಬಾವಿಹಳ್ಳಿ ಗ್ರಾಮ ಜಲಾನಯನ ಸದಸ್ಯರು ಹಾಗೂ ಜಗಳೂರು ತಾಲೂಕಿನ ಬಿದರಕೆರೆ ನಾಲಾ ಜಲಾನಯನ ಸಮಿತಿ ಸದಸ್ಯರಿಗೆ ಹಡಗಲಿಯ ಸಮಾಜ ಸೇವಾ ಸಂಸ್ಥೆ ಕಾರ್ಮೆಲ್ ಸೇವಾ ಸದನದಲ್ಲಿ 'ಸಬಲೀಕರಣ ಕಾರ್ಯಾಗಾರ' ಒಂದು ದಿನದ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ನಂತರ ನಬಾರ್ಡ್‌ನ ಸಹಾಯಕ ವ್ಯವಸ್ಥಾಪಕ ಸೋಮಶೇಖರ್ ತರಬೇತಿ ನೀಡಿದರು. ನಬಾರ್ಡ್ ಜಲಾನಯನದ ಅಭಿವೃದ್ಧಿಯ ಪರಿಕಲ್ಪನೆ, ಅವಶ್ಯಕತೆ, ಅಭಿವೃದ್ಧಿಯಿಂದ ಆಗುವ ಸಕಾರಾತ್ಮಕ ಪರಿಣಾಮ, ಸದಸ್ಯರ ಪಾತ್ರ ,ಜವಾಬ್ದಾರಿ ಹಲವಾರು ವಿಷಯಗಳ ಕುರಿತು ತರಬೇತಿ ನೀಡಿದರು.

ಪ್ರಕಾಶ್ ಸ್ನೇಡ್ಸ್ ಮಣ್ಣು, ನೀರು ಸಂರಕ್ಷಣೆ, ಸಮರ್ಪಕ ಅಭಿವೃದ್ಧಿಯಲ್ಲಿ ಜನರ ಪಾತ್ರ ಮತ್ತು ಜವಾಬ್ದಾರಿ ಕುರಿತು ಮಾಹಿತಿ ನೀಡಿದರು. ತರಬೇತಿಯಲ್ಲಿ 56 ಸದಸ್ಯರು ಪಾಲ್ಗೊಂಡಿದ್ದರು. ಅನಿತ ಸ್ವಾಗತಿಸಿದರು. ಕಾರ್ಮೇಲ್ ಸೇವಾ ಸದನದ ನಿರ್ದೇಶಕ ವಿಲಿಯಂ ಮಿರಾಂದ ಮಾತನಾಡಿದರು. ಸ್ನೇಡ್ಸ್ ಸಮುದಾಯದ ಚಿದಾನಂದ ವಂದಿಸಿದರು.



ಹೂವಿನಹಡಗಲಿಯಲ್ಲಿ 'ಸಬಲೀಕರಣ ಕಾರ್ಯಾಗಾರದಲ್ಲಿ ನಬಾರ್ಡ್‌ನ ಸಹಾಯಕ ವ್ಯವಸ್ಥಾಪಕ ಸೋಮಶೇಖರ್, ಪ್ರಕಾಶ್ ಸ್ನೇಡ್ಸ್, ಸಂಯೋಜಕಿ ಅನಿತ, ಫಾದರ್ ವಿಲಿಯಂ ಮಿರಾಂದ ಇದ್ದಾರೆ.

PRAJAVANI- 1/6/2006




ಹೂವಿನಹಡಗಲಿ ಕಾರ್ಮೆಲ್ ಸೇವಾ ಸದನದಲ್ಲಿ ಜಲಾನಯನ ಸದಸ್ಯರಿಗೆ ಹಮ್ಮಿಕೊಳ್ಳಲಾಗಿದ್ದ ತರಬೇತಿ ಕಾರ್ಯಾಗಾರದಲ್ಲಿ ತರಬೇತುದಾರ ಸೋಮಶೇಖರ್ ಮಾತನಾಡುತ್ತಿರುವುದು. ಚಿತ್ರದಲ್ಲಿ ಫಾ. ವಿಲಿಯಂ ಮಿರಾಂದ, ಸ್ನೇಡ್ರ್ಸ್ ಸಂಯೋಜಕ ಪ್ರಕಾಶ್, ಅನಿತಾ ಅವರಿದ್ದಾರೆ.

# ಜಲಾನಯನ ಸದಸ್ಯರಿಗೆ ಸಬಲೀಕರಣ ಕಾರ್ಯಾಗಾರ

ಹೂವಿನಹಡಗಲಿ, ಜೂ.೧- ಇಲ್ಲಿನ ಕಾರ್ಮೆಲ್ ಸೇವಾ ಸದನದಲ್ಲಿ ನಬಾರ್ಡ್ ಜಲಾನಯನ ನಿಧಿ ನೆರವಿನಡಿಯಲ್ಲಿ ಜಲಾನಯನ ಸದಸ್ಯರುಗಳಿಗೆ ಒಂದು ದಿನದ ಸಬಲೀಕರಣ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಾಗಾರದಲ್ಲಿ ಸಾಂಬಕ್ಕಿ ಹಳ್ಳ, ಸುಂಕಮ್ಮನಹಳ್ಳ, ಕಂಸುಬಾವಿಹಳ್ಳಿ ಹಾಗ ಜಗಳೂರು ತಾಲೂಕಿನ ಬಿದರಕೆರಿ ನಾಲಾ ಜಲಾನಯನ ಸಮಿತಿ ಸದಸ್ಯರುಗಳು ಪಾಲ್ಗೊಂಡಿದ್ದರು. ನಬಾರ್ಡ್‌ನ ಸಹಾಯಕ ವ್ಯವಸ್ಥಾಪಕ ಸೋಮಶೇಖರ್ ತರಬೇತಿ ನೀಡಿ ಜಲಾನಯನ ಅಭಿವೃದ್ಧಿ ಪರಿಕಲ್ಪನೆ, ಅವಶ್ಯಕತೆ ಮತ್ತು ಇದರಿಂದಾಗುವ ಸಕರಾತ್ಮಕ ಪರಿಣಾಮಗಳ ಕುರಿತು ಮಾಹಿತಿ ನೀಡಿದರು.

ಕಾರ್ಮೆಲ್ ಸೇವಾ ಸದನದ ನಿರ್ದೇಶಕ ಫಾ.ವಿಲಿಯಂ ಮಿರಾಂದ ಮಾತನಾಡಿ ಇಂತಹ ತರಬೇತಿ ಶಿಬಿರಗಳನ್ನು ಜಲಾನಯನ ಸಮಿತಿ ಸದಸ್ಯರುಗಳು ಸದುಪಯೋಗ ಪಡಿಸಿಕೊಂಡು ತಮ್ಮ ತಮ್ಮ ಗ್ರಾಮಗಳಲ್ಲಿ ಅನುಷ್ಠಾನಗೊಳಿಸಿದರೆ ಯೋಜನೆ ಸಾರ್ಥಕಗೊಳ್ಳುತ್ತದೆ ಎಂದು ಅಭಿಪ್ರಾಯ ಪಟ್ಟರು.

ಸ್ನೇಡ್ರ್ಸ್ ಸಂಯೋಜಕ ಪ್ರಕಾಶ್ ಮಣ್ಣು ಮತ್ತು ನೀರಿನ ಸಂರಕ್ಷಣೆ ಕುರಿತು ಮಾತನಾಡಿದರು. ಕಾರ್ಯಕ್ರಮ ಸಂಯೋಜಕಿ ಅನಿತಾ ಆರಂಭದಲ್ಲಿ ಸ್ವಾಗತಿಸಿದರು. ಕೊನೆಯಲ್ಲಿ ಸ್ನೇಡ್ರ್ಸ್ ಸಮುದಾಯ ಸಂಘಟಕ ಚಿದಾನಂದ ವಂದನೆ ಸಲ್ಲಿಸಿದರು. ಕಾರ್ಯಾಗಾರದಲ್ಲಿ 56 ಜನ ಸದಸ್ಯರು ಭಾಗವಹಿಸಿದ್ದರು.

# ಸಿದ್ದಮ್ಮನಹಳ್ಳಿ ಗ್ರಾಮದಲ್ಲಿ ಆಹಾರ ಕಿಟ್ ವಿತರಣೆ

ಬೆಂಗಳೂರು.ಜೂ.2- ತಾಲ್ಲೂಕಿನ ಸಿದ್ದಮ್ಮನಹಳ್ಳಿ ಗ್ರಾಮದಲ್ಲಿ ಪ್ರೇರಣಾ ಸಮಾಜ ಸೇವಾ ಸಂಸ್ಥೆ ವತಿಯಿಂದ ಸೋಮವಾರ 42 ಬಡ ಕುಟುಂಬಗಳಿಗೆ ಆಹಾರ ಧಾನ್ಯ ಕಿಟ್ ಗಳನ್ನು ವಿತರಣೆ. ಕೊರೋನ ಎರಡನೇ ಅಲೆಯಿಂದ ರಾಜ್ಯದಲ್ಲಿ ಲಾಕ್ಡೌನ್ ಇರುವುದರಿಂದ ಅನೇಕ ಬಡ, ಕೂಲಿ ಕಾರ್ಮಿಕರು ಕೆಲಸ ಇಲ್ಲದೆ ಒಂದು ಹೊತ್ತು ಊಟಕ್ಕೆ ಪರದಾಡುವ ಸ್ಥಿತಿ ಬಂದಿದೆ. ಇಂತಹ ಸಂದರ್ಭಗಳಲ್ಲಿ ಪ್ರೇರಣಾ ಸಮಾಜ ಸೇವಾ ಸಂಸ್ಥೆಯು ಬೆಂಗಳೂರು ತಾಲ್ಲೂಕಿನ ಸಿದ್ದಮ್ಮನ ಹಳ್ಳಿಯ ಬಡ, ವಿಧವೆ, ಹಾಗೂ ವಿಕಲಚೇತನರ 42 ಕುಟುಂಬಗಳಿಗೆ ಆಹಾರ ಧಾನ್ಯ, ತರಕಾರಿ ಹಾಗೂ ಅಡಿಗೆ ಸಾಮಾಗ್ರಿಗಳನ್ನು ಉಚಿತ ನೀಡಿದರು. ಈ ಸಂದರ್ಭದಲ್ಲಿ ಪ್ರೇರಣಾ ಸಮಾಜ ಸೇವಾ ಸಂಸ್ಥೆಯ ನಿರ್ದೇಶಕ ಫಾ. ವಿಲಿಯಂ ಮಿರಾಂಡರ, ಫಾ. ವಿಶಾಲ್, ಫಾ.ಸುನಿಲ್ ಹಾಗೂ ಕರುನಾಡ ರಕ್ಷಣಾ ಪಡೆ ಜಿಲ್ಲಾಧ್ಯಕ್ಷೆ ಎಸ್.ಆರ್. ಇಂದಿರಾ , ತಾಲ್ಲೂಕು ಅಧ್ಯಕ್ಷ ಎಂ. ರಂಗಪ್ಪ ಉಪಸ್ಥಿತರಿದ್ದರು.



LOKADHARSHANA – 13/9/06

# ಕಿಶೋರಿಯರಿಗೆ ಶಕ್ತಿ ತರಬೇತಿ



ಹೂವಿನ ಹಡಗಲಿ ಸೆ.12-ಇಲ್ಲಿನ ಕಾರ್ಮೆಲ್ ಜ್ಯೋತಿ ಎನ್.ಜಿ.ಓ. ಮತ್ತು ಶಿಶು ಅಭಿವೃದ್ಧಿ ಇಲಾಖೆ ಆಶ್ರಯದಲ್ಲಿ ಕಿಶೋರಿಯರಿಗೆ ಶಕ್ತಿ ತರಬೇತಿ ಕಾರ್ಯಕ್ರಮ ನಡೆಯಿತು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ನಿರ್ದೇಶಕ ಫಾ|ವಿಲಿಯಂ ಮಿರಾಂದ ಮಾತನಾಡಿದರು.ಸಿಡಿಪಿಓ ಅಧಿಕಾರಿ ಮಹಮ್ಮದ್ ಸರ್ವರ್ ಪ್ರಾಸ್ತಾವಿಕ ಮಾತನಾಡಿದರು.

ಬಾಲ್ಯವಿವಾಹ, ಶಿಕ್ಷಣ,ಆರೋಗ್ಯ, ಚುಚ್ಚುಮದ್ದು ಆಹಾರ ಕುರಿತು ತರಬೇತಿ ನೀಡಲಾಯಿತು. ಅಂಗನವಾಡಿ ಮೇಲ್ವಿಚಾರಕಿ ಸಾವಿತ್ರಮ್ಮ ನಿರೂಪಿಸಿದರು. ಡಿ.ಹನುಮಕ್ಕ ಸ್ವಾಗತಿಸಿದರು.ನಾಗರತ್ನ ತರಬೇತಿ



ಜಗಳೂರು ತಾಲೂಕಿನ ಪಲ್ಲಾಗಟ್ಟೆ ಗ್ರಾಮದ ಸಿದ್ದಮ್ಮ ಗ್ರಾಮೀಣ ಪ್ರೌಢಶಾಲೆಯಲ್ಲಿ ಬುಧವಾರ ಪ್ರೇರಣಾ ಸಮಾಜ ಸೇವಾ ಸಂಸ್ಥೆಯಿಂದ ನಡೆದ ಉಚಿತ ದಂತ ತಪಾಸಣಾ ಶಿಬಿರವನ್ನು ಶಾಲಾ ಸಲಹಾ ಸಮಿತಿ ಅಧ್ಯಕ್ಷ ಲೋಕೇಶ್ವರಪ್ಪ ಉದ್ಘಾಟಿಸಿದರು. ಪ್ರೇರಣಾ ಸಮಾಜ ಸೇವಾ ಸಂಸ್ಥೆಯ ಫಾದರ್ ವಿಲಿಯಂ ಮಿರಾಂದ, ಲಯನ್ಸ್ ಕ್ಲಬ್ ಅಧ್ಯಕ್ಷೆ ಶಾಯಿನಾಬೇಗಂ, ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಅರವಿಂದನ್, ಮುಖ್ಯ ಶಿಕ್ಷಕ ಮಾರುತೇಶ್, ಕೆಂಚನಗೌಡ, ಮಮತಾ ಮತ್ತಿತರರಿದ್ದರು.

PRAJAVANI- 19/9/2006



ಹೂವಿನಹಡಗಲಿಯಲ್ಲಿ ಭಾನುವಾರ ನಡೆದ ಅಂಗನವಾಡಿ ಕಾರ್ಯಕರ್ತೆಯರ ಸಮಾವೇಶದಲ್ಲಿ ಎಐಟಿಯುಸಿ ರಾಜ್ಯ ಘಟಕ ಅಧ್ಯಕ್ಷ ಎಚ್.ಕೆ. ರಾಮಚಂದ್ರಪ್ಪ ಮಾತನಾಡಿದರು. ಫಾದರ್ ವಿಲಿಯಂ ಮಿರಾಂದ, ಎಚ್. ವೀರಣ್ಣ, ಓ. ಬ ಸವನಗೌಡ ಉಪಸ್ಥಿತರಿದ್ದರು.

SANJAYVANI – 14/9/2006

# ಕಿಶೋರಿಯರ ಶಕ್ತಿ ತರಬೇತಿ ಕಾರ್ಯಕ್ರಮ

ಹೂವಿನಹಡಗಲಿ, ಸೆ.14- ಪಟ್ಟಣದ ಕಾರ್ಮೆಲ್ ಜ್ಯೋತಿ ಎನ್.ಜಿ.ಓ. ಚರ್ಚ್ ಮತ್ತು ಶಿಶು ಅಭಿವೃದ್ಧಿ ಇಲಾಖೆ ಹಡಗಲಿ ಇವರ ಸಂಯುಕ್ತಾಶ್ರಯದಲ್ಲಿ ಕಿಶೋರಿಯರಿಗೆ ಶಕ್ತಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಕಾರ್ಮೆಲ್ ಸೇವಾ ಸದನದ ನಿರ್ದೇಶಕರಾದ ಫಾದರ್ ವಿಲಿಯಂ ಮಿರಾಂದ ಅಧ್ಯಕ್ಷತೆವಹಿಸಿದ್ದರು. ಅವರು ಮಾತನಾಡಿ, ಹದಿಹರೆಯದ ವಯಸ್ಸಿನಲ್ಲಿ ಶಾರೀರಿಕ ಬದಲಾವಣೆಗಳಾಗುವಾಗ ಅನೇಕರು, ಅಜ್ಞಾನದಿಂದ ಮಾನಸಿಕ ಒತ್ತಡಗೊಳಗಾಗುತ್ತಾರೆ. ಇಂತಹ ತರಬೇತಿಗಳಿಂದ ಇದನ್ನು ತಪ್ಪಿಸಲು ಸಾಧ್ಯ ಎಂದರು. ಮುಖ್ಯ ಅತಿಥಿಯಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಮಹಮ್ಮದ್ ಸರ್ವರ್ ಪ್ರಾಸ್ತಾವಿಕ ನುಡಿಯಲ್ಲಿ ಕಿರಿವಯಸ್ಸಿನಲ್ಲಿ ಮದುವೆ ಮಾಡಿದರೆ ಆಗುವ ತೊಂದರೆಗಳು ಮತ್ತು ತರಬೇತಿ ವಿಷಯುಗಳ ಕುರಿತು ಮಾತನಾಡಿದರು. ಕಾರ್ಯಕ್ರಮದ ಆರಂಭದಲ್ಲಿ ಕಿಶೋರಿಯರು ಪ್ರಾರ್ಥನೆ ಮಾಡಿದರು. ಕಾರ್ಯಕ್ರಮದಲ್ಲಿ ಕಿಶೋರಿಯರಿಗೆ ಮುಖ್ಯವಾಗಿ ಕಿಶೋರ ಅವ್ಯಸ್ಥೆ, ಮದುವೆ, ಶಿಕ್ಷಣ, ಆರೋಗ್ಯ, ಮನೆಮದ್ದು, ಚುಚ್ಚುಮದ್ದು, ಆಹಾರ ಇತ್ಯಾದಿ ವಿಷಯಗಳ ಕುರಿತು ತರಬೇತಿಯನ್ನು ನೀಡಲಾಯಿತು. ಹೆಚ್.ಎಮ್.ಸಾವಿತ್ರಮ್ಮ ಮೇಲ್ವಿಚಾರಕರು ನಿರೂಪಣೆ ಮಾಡಿದರೆ, ಡಿ.ಹನುಮಕ್ಕ ಸ್ವಾಗತಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಮೇಲ್ವಿಚಾರಕರಾದ ಡಿ.ಹನುಮಕ್ಕ ಮತ್ತು ನಾಗರತ್ನ ಇಟಗಿ ತರಬೇತಿ ನೀಡಿದರು. ವಿವಿಧ ಹಳ್ಳಿಗಳಿಂದ ಸುಮಾರು ಎಪ್ಪತ್ತೈದು ಕಿಶೋರಿಯರು ತರಬೇತಿಯಲ್ಲಿ ಭಾಗವಹಿಸಿದ್ದರು.

SANJAYVANI – 24/9/2006

# ಬಾವಿಹಳ್ಳಿಯಲ್ಲಿ ಉಚಿತ ಕಾನೂನು ವಿದ್ಯಾಪ್ರಸಾರ ಕಾರ್ಯಕ್ರಮ

ಹೂವಿನಹಡಗಲಿ, ಏ.೨೯- ಇಲ್ಲಿನ ಕಾರ್ಮೆಲ್ ಜ್ಯೋತಿ ಎನ್.ಜಿ.ಓ. ಮತ್ತು ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘದ ಆಶ್ರಯದಲ್ಲಿ ತಾಲೂಕಿನ ಬಾವಿಹಳ್ಳಿಯಲ್ಲಿ ಉಚಿತ ಕಾನೂನು ವಿದ್ಯಾ ಪ್ರಸಾರ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ನ್ಯಾಯಾಧೀಶ ಕೆ.ರವೀಂದ್ರ ಕಾರ್ಯಕ್ರಮ ಉದ್ಘಾಟಿಸಿದರು. ವಕೀಲರ ಸಂಘದ ಅಧ್ಯಕ್ಷ ಟಿ.ಸೋಮಪ್ಪ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ವಕೀಲರುಗಳಾದ ಸಿ.ಕೆ.ಎಂ. ಬಸವಲಿಂಗಸ್ವಾಮಿ, ಎಂ.ಚಂದ್ರಪ್ಪ, ಸುಧಾಕರ ಶ್ಯಾನಭಾಗ್, ಐ.ಚಿದಾನಂದ, ಕೆ.ಸೈಫುಲ್ಲಾ ಸಾಹೇಬ್, ಗ್ರಾ.ಪಂ. ಅಧ್ಯಕ್ಷ ಬಿ.ಕಸ್ತೂರಮ್ಮ ಮುಂತಾದವರು ಉಪಸ್ಥಿತರಿದ್ದರು.

ವಕೀಲ ಎಂ.ಗಂಗಾಧರ ಅವರು ಜನನ ಮರಣ ಕಾಯ್ದೆ ಕುರಿತು, ಸೊಪ್ಪಿನ ಸುರೇಶ್ ಅವರು ಜೀವ ನಾಂಶ ಕುರಿತು, ಎನ್.ವಿ.ವಿಜಯಲಕ್ಷ್ಮಿ ಮಹಿಳೆಯರ ಮೇಲಿನ ದೌರ್ಜನ್ಯ ಕುರಿತು, ಷಣ್ಮುಖಗೌಡ ಹಿಂದೂ ವಿವಾಹ ಕುರಿತು ಹಾಗೂ ಬಸವರಾಜ ಅವರು ವಿವಾಹ ವಿಚ್ಛೇದನ ಕುರಿತು ಉಪನ್ಯಾಸ ನೀಡಿದರು.

ಕಾರ್ಮೆಲ್ ಸೇವಾ ಸದನದ ನಿರ್ದೇಶಕ ಫಾ.ವಿಲಿಯಂ ಮಿರಾಂದ ಸ್ವಾಗತಿಸಿದರು. ವೈ.ಎಂ.ಪರಮೇಶ್ವರಯ್ಯ ಕಾರ್ಯಕ್ರಮ ನಿರೂಪಿಸಿದರು.

LOKADHARSHANA – 18/3/06




ಹೂವಿನ ಹಡಗಲಿ  ಕಾರ್ಮೆಲ್ ಜ್ಯೋತಿ ಎನ್.ಜಿ.ಓ. ಆಶ್ರಯದಲ್ಲಿ 31 ಸ್ವಸಹಾಯ ಗುಂಪುಗಳ ಪ್ರತಿನಿಧಿಗಳಿಗೆ 2ದಿನ ತರಬೇತಿಯಲ್ಲಿ ಪಾಲ್ಗೊಂಡ ಮಹಿಳೆಯರು.

NAGARIKA – 21/3/06

## ಸ್ವ ಸಹಾಯ ಸಂಘದ ಪ್ರತಿನಿಧಿಗಳಿಗೆ ತರಬೇತಿ

ಹೂವಿನಹಡಗಲಿ, 20 - ಕಾರ್ಮೆಲ್ ಜ್ಯೋತಿ ಎನ್.ಜಿ.ಓ. ಹೂವಿನಹಡಗಲಿ ಇದರ ಕೆಳಗೆ ಇರುವ 31 ಮಹಿಳಾ ಸ್ವ ಸಹಾಯ ಗುಂಪುಗಳ ಪ್ರತಿನಿಧಿಗಳಿಗೆ ಎರಡು ದಿನಗಳ ತರಬೇತಿಯನ್ನು ನೀಡಲಾಯಿತು.

ತರಬೇತಿಯಲ್ಲಿ ಮಹಿಳಾ ಸಂಘಟನೆ ಎಂದರೆ ಏನು ? ಇದರ ರೂಪು ರೇಷಗಳು ಯಾವುದು, ಸಂಘಟನೆಯಿಂದ ಮಹಿಳೆಯರಿಗೆ ಆಗುವ ಅನುಕೂಲಗಳು ಮತ್ತು ಸದಸ್ಯರ ಮಧ್ಯೆ ಇರಬೇಕಾದ ಸಂಬಂಧ ಇತ್ಯಾದಿ ಮಾಹಿತಿಯನ್ನು ನೀಡಲಾಯಿತು.

ತರಬೇತಿಯನ್ನು ಬಳ್ಳಾರಿಯ ಬಿ.ಡಿ.ಡಿ.ಎಸ್.ನ ನಿರ್ದೇಶಕರಾದ ಫಾದರ್ ವಿನ್ಸೆಂಟ್ ಮತ್ತು ಚಿನ್ನಪ್ಪ ಹಾಗೂ ರಾಯಪ್ಪ ಸಂಪನ್ಮೂಲ ವ್ಯಕ್ತಿಗಳಾಗಿ ತರಬೇತಿಯನ್ನು ನೆರವೇರಿಸಿಕೊಟ್ಟರು.

PRAJAVANI – 24/3/06

## ಜಾನುವಾರುಗಳ ರೋಗ ನಿಯಂತ್ರಣ ಜಾಗೃತಿ ಶಿಬಿರ

(ಲೋಕದರ್ಶನ ವರದಿ)

ಹೂವಿನ ಹಡಗಲಿ ಮಾ.23-ಇಲ್ಲಿನ ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ,ಕಾರ್ಮೆಲ್ ಜ್ಯೋತಿ ಎನ್.ಜಿ.ಓ.ಆಶ್ರಯದಲ್ಲಿ ಆಸ್ಕಾಡ್ ಯೋಜನೆ-ಅಡಿಯಲ್ಲಿ ಜಾನುವಾರುಗಳ ರೋಗ ನಿಯಂತ್ರಣ ಜಾಗೃತಿ ಶಿಬಿರವನ್ನು ಪಟ್ಟಣದ ಕಾರ್ಮೆಲ್ ಸೇವಾ ಸದನದಲ್ಲಿ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಪ.ಪಂ.ಅಧ್ಯಕ್ಷ ಯಮನೂರಪ್ಪ ಉದ್ಘಾಟಿಸಿದರು. ಅಧ್ಯಕ್ಷತೆ ತಾ.ಪಂ.ಅಧ್ಯಕ್ಷ ಎಂ.ನರೇಂದ್ರ ವಹಿಸಿದ್ದರು.

ಶಿಬಿರದಲ್ಲಿ ಸಂಸ್ಥೆಯ ನಿರ್ದೇಶಕ ಫಾ। ವಿಲಿಯಂ ಮಿರಾಂಡ,ರಾಜೇಶ್,ಕೃಷ್ಣ ನಾಯ್ಕ ಹಾಗೂ ಪರಮೇಶ್ವರ ನಾಯ್ಕ,ಸಹಾಯಕ ನಿರ್ದೇಶಕರು,ಪಶು ಇಲಾಖೆಯ ವೈದ್ಯರು ಉಪಸ್ಥಿತರಿದ್ದರು.

USHA KIRAN – 5/12/05

# 'ಏಡ್ಸ್ ರೋಗಿಗೆ ಪ್ರೀತಿಯ ಮದ್ದು ಅವಶ್ಯಕ'

ಹೂವಿನಹಡಗಲಿ: ಏಡ್ಸ್ ರೋಗ ವಿಶ್ವದ ಎಲ್ಲ ರಾಷ್ಟ್ರಗಳಲ್ಲಿ ವ್ಯಾಪಕವಾಗಿ ಹರಡಿದೆ. ನಮ್ಮ ದೇಶದಲ್ಲಿನ ಅನಕ್ಷರತೆ, ಬಡತನ, ಮೂಢನಂಬಿಕೆಗಳು, ದೇವದಾಸಿ ಪದ್ಧತಿಗಳಿಂದ ಏಡ್ಸ್ ಹಬ್ಬಿದೆ.

ಪಾಶ್ಚಾತ್ಯ ದೇಶಗಳಲ್ಲಿ ಜನರ ವಿಲಾಸಿ, ಭೋಗದ, ಮದ್ಯವ್ಯಸನಿಗಳಿಂದ ರೋಗ ಹೆಚ್ಚುತ್ತಲಿದೆ. ಸರಕಾರ ಈ ರೋಗ ತಡೆಗಟ್ಟುವಿಕೆ ಬಗ್ಗೆ ಹಣ ವ್ಯಯಿಸುತ್ತಿದ್ದರೂ, ಜನಸಾಮಾನ್ಯರಿಗೆ ಇನ್ನೂ ಅರಿವು ಮೂಡುತ್ತಿಲ್ಲ ಎಂದು ನಿವೃತ್ತ ವೈದ್ಯಾಧಿಕಾರಿ ಡಾ. ಮಲ್ಲಿಕಾರ್ಜುನ ಗೌಡ ತಿಳಿಸಿದರು.

ಅವರು ಭಾನುವಾರ ಇಲ್ಲಿನ ಕಾರ್ಮೆಲ್ ಎನ್.ಜಿ.ಓ. ಮಹಿಳಾ ಸಮುಖ್ಯ ಬಳ್ಳಾರಿ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಏಡ್ಸ್ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

1981 ರಲ್ಲಿ ಮೊಟ್ಟಮೊದಲಿಗೆ ಅಮೆರಿಕಾದಲ್ಲಿ ಪತ್ತೆಯಾದ ಈ ಏಡ್ಸ್ ಮಹಾಮಾರಿ ರೋಗ ಇಂದು ಪ್ರಪಂಚದಾದ್ಯಂತ ತನ್ನ ಕೆನ್ನಾಲಿಗೆ ಚಾಚಿದೆ. ಕಣ್ಣಿಗೆ ಕಾಣದ ಎಚ್.ಐ.ವಿ. ವೈರಸ್ ಮನುಷ್ಯನ ದೇಹದೊಳಗೆ ನುಸುಳಿ ರೋಗ ತರುತ್ತದೆ ಎಂದರು.

ಸಹಜ ಲೈಂಗಿಕತೆಯಿಂದ ಈ

ಸಮಾಜದಲ್ಲಿ ಲೈಂಗಿಕತೆ ಮುಕ್ತವಾಗಿರಬೇಕು. ಏಡ್ಸ್ ರೋಗಿಗಳಿಗೆ ಭಯ ಹುಟ್ಟಿಸದೇ ಪ್ರೀತಿಯಿಂದ ಕಾಣಬೇಕೆಂದರು.

ಸಂಸ್ಕೃತಿಗೆ ಧಕ್ಕೆ: ಕಾರ್ಯಕ್ರಮ ಉದ್ಘಾಟಿಸಿದ ತಾಲೂಕು ದಂಡಾಧಿಕಾರಿ ಸಿ. ಚಾಂದಸಾಹೇಬ ಮಾತನಾಡಿ, ಆಧುನಿಕ ಯುಗದಲ್ಲಿ ಪಾಶ್ಚಾತ್ಯ ಸಂಸ್ಕೃತಿಯಿಂದ ಅನಾಗರಿಕ ಪ್ರವೃತ್ತಿಯಿಂದ ದೇಶದ ಸಂಸ್ಕೃತಿಗೆ ಧಕ್ಕೆಯಾಗುತ್ತಿದೆ ಎಂದು ವಿಷಾದಿಸಿದರು. ಪ್ರೌಢಶಾಲೆ ಹಂತದಿಂದ ಕಾಲೇಜಿನವರೆಗೆ ವಿದ್ಯಾರ್ಥಿಗಳಿಗೆ ಲೈಂಗಿಕ ಶಿಕ್ಷಣ ಅವಶ್ಯವಾಗಿ ಬೋಧಿಸಬೇಕೆಂದರು. ವೆಂಕಟರಾಮ ಅಧ್ಯಕ್ಷತೆ ವಹಿಸಿದ್ದರು. ಸಿ.ಪಿ.ಐ. ಪಾಂಡುರಂಗಯ್ಯ, ಸಿ.ಡಿ.ಪಿ.ಓ. ಪರಮೇಶ್ವರಪ್ಪ, ಬಿ.ಇ.ಓ. ಕೆ. ರಾಮನಗೌಡ, ಬಿ.ಜಿ.ವಿ.ಎಸ್. ಅಧ್ಯಕ್ಷ ಎಫ್.ಸಿ. ಕಾಲವಾಡಮಠ ಮಾತನಾಡಿದರು. ರುದ್ರೇಶ ಸ್ವಾಗತಿಸಿ, ಫಾ. ವಿಲಿಯಂ ಮಿರಾಂದ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಸ್. ದ್ವಾರಕೇಶರೆಡ್ಡಿ ನಿರೂಪಿಸಿದರು.

ಸ್ಥಳೀಯ ಕಟ್ಟಿರಂಗ ಪ್ರದರ್ಶಿಸಿದ ಏಡ್ಸ್ ಮಹಾಮಾರಿ ಹಾಗೂ ಹಗರಿಬೊಮ್ಮನಹಳ್ಳಿ ಮಹಿಳಾ ಸಮುಖ್ಯ ತಂಡದವರು ಅಭಿನಯಿಸಿದ ಬೀದಿ ನಾಟಕಗಳು ಜನಮನ

PRAJAVANI –5/12/05



ಹೂವಿನ ಹಡಗಲಿಯ ಚರ್ಕಾಯೋಜನೆ, ಬಳ್ಳಾರಿಯ ಮಹಿಳಾ ಸಮಖ್ಯಾ ಕರ್ನಾಟಕ, ಹಡಗಲಿಯ ಕಾರ್ಮೆಜ್ಯೋತಿ ಎನ್‌ಜಿಒ, ಹಾಗೂ ಇಲಾಖಾಧಿಕಾರಿಗಳ ಸಹಯೋಗದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ವಿಶ್ವಏಡ್ಸ್ ದಿನಾಚರಣೆಯನ್ನು ತಾಲೂಕು ದಂಡಾಧಿಕಾರಿಗಳಾದ ಸಿ.ಚಾಂದ್‌ಸಾಹೇಬ್ ಉದ್ಘಾಟಿಸಿದರು. ರಾಮನಗೌಡ, ಡಾ.ಮಲ್ಲಿಕಾರ್ಜುನಗೌಡ, ಎಚ್.ಸಿ.ಕಾಲವಾಡಮಠ ಭಾಗವಹಿಸಿದ್ದರು.

# ಏಡ್ಸ್: ನಿರ್ಲಕ್ಷ್ಯ ಬೇಡ

ಪ್ರಜಾವಾಣಿ ವಾರ್ತೆ

**ಹೂವಿನ ಹಡಗಲಿ:** ಏಡ್ಸ್ ರೋಗಿಗಳು ಮನುಷ್ಯರೇ ಅವರನ್ನು ಕಡೆಗಣಿಸದೇ ಮನುಷ್ಯತ್ವದಿಂದ ನೋಡಬೇಕಾಗಿದೆ ಎಂದು ತಾಲ್ಲೂಕು ದಂಡಾಧಿಕಾರಿಗಳಾದ ಸಿ.ಚಾಂದ್‌ಸಾಹೇಬ್ ನುಡಿದರು.

ಚರ್ಕಾ ಯೋಜನೆ, ಬಳ್ಳಾರಿಯ ಮಹಿಳಾ ಸಮಖ್ಯಾ ಕರ್ನಾಟಕ ಮತ್ತು ಹಡಗಲಿಯ ಕಾರ್ಮೆ ಜ್ಯೋತಿ ಎನ್‌ಜಿಒ ಹಾಗೂ ಇಲಾಖಾಧಿಕಾರಿಗಳ ಸಹಯೋಗದಲ್ಲಿ ಭಾನುವಾರ ಏರ್ಪಡಿಸಲಾಗಿದ್ದ ವಿಶ್ವ ಏಡ್ಸ್ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಉಪನ್ಯಾಸಕರಾಗಿ ಆಗಮಿಸಿದ್ದ ಡಾ. ಮಲ್ಲಿಕಾರ್ಜುನಗೌಡ, ಆಚರಣೆಗಳು ಕೇವಲ ಕಾಟಾಚಾರಕ್ಕಾಗಿವೆ. ಜನಜಾಗೃತಿ ಗೊಳಿಸಲು ಸಾಧ್ಯವಾಗುತ್ತಿಲ್ಲ ಎಂದು ಖೇದ ವ್ಯಕ್ತಪಡಿಸಿದರು. ಹಳ್ಳಿಗಳಲ್ಲಿ ಮೂಢನಂಬಿಕೆಗಳಿಂದಾಗಿ ಹೆಚ್ಚು ಮುಗ್ಧರು ಈ ರೋಗಕ್ಕೆ ಬಲಿಯಾಗುತ್ತಿದ್ದಾರೆ. ರೋಗಿಗಳನ್ನು ಪ್ರೀತಿ ಯಿಂದ ನೋಡಿದರೆ ಧೈರ್ಯದಿಂದ ಹೆಚ್ಚು ಕಾಲ ಜೀವಿಸುತ್ತಾರೆ ಎಂದರು.

ಸಿಡಿಪಿಒ ಪರಮೇಶ್ವರ್‌ರಾವ್, ಕ್ಷೇತ್ರ ಶಿಕ್ಷಣಾಧಿಕಾರಿ ರಾಮನಗೌಡ, ಸಿ.ಪಿ.ಐ. ಪಾಂಡುರಂಗ, ಬಿಜೆಎಂಎಸ್‌ನ ಅಧ್ಯಕ್ಷರಾದ ಎಚ್.ಸಿ.ಕಾಲವಾಡಮಠ ಮಾತನಾಡಿದರು. ವೆಂಕಟರಾಮು ಅಧ್ಯಕ್ಷತೆ ವಹಿಸಿದ್ದರು.

ಸುರೇಶ್ ಅಂಗಡಿ ಮತ್ತು ಸಂಗಡಿಗರು ಏಡ್ಸ್ ಜಾಗೃತಿ ಕುರಿತು ಗೀತೆ ಹಾಡಿದರು. ಆರಂಭದಲ್ಲಿ ಕಾರ್ಮೆಲ್ ಸೇವಾಸದನದ ನಿರ್ದೇಶಕ ವಿಲಿಯಂ ಮಿರಾಂದ ಸ್ವಾಗತಿಸಿದರು. ರುದ್ರೇಶ್ ಪ್ರಾಸ್ತಾವಿಕ ಮಾತನಾಡಿದರು. ದ್ವಾರಕೇಶರೆಡ್ಡಿ ನಿರೂಪಿಸಿದರು.

NAGARA VANI – 23/11/05

# ಶ್ರವಣ ದೋಷ ತಪಾಸಣೆ ಹಾಗೂ ಶ್ರವಣ ಯಂತ್ರ ವಿತರಣಾ ಕಾರ್ಯಕ್ರಮ

ಹೂವಿನಹಡಗಲಿ, 22 - ಬಳ್ಳಾರಿ ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ, ಹಾಗೂ ವಿಶ್ವಭಾರತಿ ಕಲಾನಿಕೇತನ ಮತ್ತು ಶಿಕ್ಷಣ ಸಂಸ್ಥೆ ಎನೋಬಲ್ ಹೌಸ್ ಮತ್ತು ಕಾರ್ಮೆಲ್ ಜ್ಯೋತಿ ಎನ್.ಜಿ.ಓ. ಹಡಗಲಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಡಗಲಿ ಇವರ ಸಂಯುಕ್ತ ಆಶ್ರಯದಲ್ಲಿ ಶ್ರವಣದೋಷ ಇರುವವರನ್ನು ಉಚಿತವಾಗಿ ಪರೀಕ್ಷಿಸಿ ಅರ್ಹ ಫಲಾನುಭವಿಗಳಿಗೆ ಕೊಡ ಲಾಗುವುದು. ದಿ. 24 ರಂದು ಮುಂಜಾನೆ 10 ಗಂಟೆಯಿಂದ ಸಂಜೆ 4 ಗಂಟೆಯ ವರೆಗೆ ಹಡಗಲಿಯ ಸಾರ್ವಜನಿಕರ ಆಸ್ಪತ್ರೆಯಲ್ಲಿ ಪರೀಕ್ಷಿಸಲಾಗುವದು.

ದಿ. 25 ರಂದು ಉಚಿತ ಶ್ರವಣ ಯಂತ್ರ ವಿತರಣಾ ಸಮಾರಂಭ ಬೆಳಿಗ್ಗೆ 11.30 ಕ್ಕೆ ಕ್ಕೆ ಹೂವಿನಹಡಗಲಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಜರುಗಲಿದೆ. ಬರುವಾಗ ಪಾಸಪೋರ್ಟ್ ಸೈಜಿನ 2 ಪೋಟೋ ಹಾಗೂ 50 ಸಾವಿರ ರೂಪಾಯಿ ಒಳಗಿನ ಆದಾಯ ಪ್ರಮಾಣ ಪತ್ರ ತರಬೇಕು.

# ನ.25ಕ್ಕೆ ಉಚಿತ ಶ್ರವಣ ಯಂತ್ರ ವಿತರಣಾ ಸಮಾರಂಭ

(ಲೋಕದರ್ಶನ ವರದಿ)

ಹೂವಿನ ಹಡಗಲಿ ನ.21-ಬಳ್ಳಾರಿ ಜಿಲ್ಲಾ ಅಂಗವಿಕಲರ ಪುನರ್ವಸತಿಕೇಂದ್ರ,ವಿಶ್ವಭಾರತಿ ಕಲಾನಿಕೇತನ ಮತ್ತು ಶಿಕ್ಷಣ ಸಂಸ್ಥೆಯು ,ಎನೋಬಲ್ ಹೌಸ್ ಮತ್ತು ಕಾರ್ಮೆಲ್ ಜ್ಯೋತಿ ಎನ್.ಜಿ.ಓ.(ಚರ್ಚ್) ಹೂವಿನ ಹಡಗಲಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆಶ್ರಯದಲ್ಲಿ ಉಚಿತ ಶ್ರವಣ ಯಂತ್ರ ವಿತರಣಾ ಕಾರ್ಯಕ್ರಮವನ್ನು ನ.24ರಿಂದ 25ರವರೆಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆಯಲಿದೆ.

ನ.24ಕ್ಕೆ ತಜ್ಞವೈದ್ಯರಿಂದ ಶ್ರವಣ ದೋಷ ಇರುವವರನ್ನು ಉಚಿತವಾಗಿ ಪರೀಕ್ಷಿಸಿ ನ.25ಕ್ಕೆ ಅರ್ಹ ಫಲಾನುಭವಿಗಳಿಗೆ ಸಲಕರಣೆಗಳನ್ನು ವಿತರಣೆ ಮಾಡಲಾ ಗುವುದು ಹೆಚ್ಚಿನ ಮಾಹಿತಿಗಾಗಿ ಎಂದು ಸಂಸ್ಥೆಯ ನಿರ್ದೇಶಕ ಫಾ|ವಿಲಿಯಂ ಮಿರಾಂದ ಮೊ.9448753443 ಸಂಪರ್ಕಿಸಲು ಕೋರಲಾಗಿದೆ.

LOKADHARSHANA – 19/3/06

# ಕುರಿಗಾರರಿಗೆ ಒಂದು ದಿನದ ಕಾರ್ಯಗಾರ

ಹೂವಿನ ಹಡಗಲಿ ಮಾ.18-ಇಲ್ಲಿನ ಕಾರ್ಮೆಲ್ ಸೇವಾ ಸದನದಲ್ಲಿ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ,ಪಶುಪಾಲನ ಮತ್ತು ಪಶು ವೈದ್ಯ ಇಲಾಖೆ ಹಾಗೂ ಕಾರ್ಮೆಲ್ ಜ್ಯೋತಿ ಎನ್.ಜಿ.ಓ.ಆಶ್ರಯದಲ್ಲಿ ತಾಲೂಕಿನ ಕುರಿಗಾರರಿಗೆ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಕುರಿಗಳಲ್ಲಿ ಕಾಣಿಸಿಕೊಳ್ಳುವ ಸಾಂಕ್ರಮಿಕ ರೋಗಗಳಾದ ಕರುಳ ಬೇನೆ,ಮೈಲಿ ಬೇನೆ,ಗಂಟಲು ಬೇನೆ, ಕಾಲು ಬಾಯಿ,ನೀಲಿನಾಲಿಗೆ ರೋಗದ ಬಗ್ಗೆ ಮುಂಜಾಗ್ರತೆಯಿಂದ ಲಸಿಕೆ ಹಾಕಿಸಬೇಕು.ವರ್ಷಕ್ಕೆ 5-6ಬಾರಿ ಜಂತು ನಾಶಕ ಔಷಧಿ ಕುಡಿಸಬೇಕು.ಇದರಿಂದ ಕುರಿಗಳನ್ನು ರೋಗದಿಂದ ತಡೆಗಟ್ಟಬಹುದು. ಅಷ್ಟೇ ಅಲ್ಲದೆ ಸತ್ತ ಕುರಿಗಳನ್ನು ಮರಕ್ಕೆ ತೂಗು ಹಾಕದೆ ನೆಲದಲ್ಲಿ ಮುಚ್ಚಬೇಕು ಮೌಡ್ಯತೆ ಅನುಸರಿಸಬಾರದು ಎಂದು ಪಶು ವೈದ್ಯಧಿಕಾರಿ ಡಾ|ಚಂದ್ರಪ್ಪ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಉತ್ತಂಗಿಯ ಕನಕದಾಸ ಕುರಿ ಸಾಕಣಿಕೆದಾರ ಸಂಘದ ಅಧ್ಯಕ್ಷಕೆ.ಜಿ.ಹನುಮಂತಪ್ಪ ಅಧ್ಯಕ್ಷತೆ ವಹಿಸಿದ್ದರು.

ಪಶು ಆಸ್ಪತ್ರೆಯ ಸಹಾಯಕ ನಿರ್ದೇಶಕ ಬಿ.ಎಲ್. ಪರಮೇಶ್ವರನಾಯ್ಕ ,ರಾಮಣ್ಣ ಚಮನ್ ಸಾಹೇಬ್, ಫಾ|ವಿಲಿಯಂ ಮಿರಾಂದ ಉಪಸ್ಥಿತರಿದ್ದರು.

VIJAY KARNNATAKA 29/3/06

# ನಾಗತಿ ಬಸಾಪುರ: ಕೃಷಿ ಸಂವಾದ ಕಾರ್ಯಕ್ರಮ

ಹೂವಿನ ಹಡಗಲಿ, ಮಾ.28- ಸಮೀಪದ ನಾಗತಿ ಬಸಾಪುರದಲ್ಲಿ ಇತ್ತೀಚೆಗೆ ಬೈಫ್ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮತ್ತು ಗ್ರಾಮ ಪಂಚಾಯಿತಿಯ ಆಶ್ರಯದಲ್ಲಿ ಸಿರಿ ಸಮೃದ್ಧಿ ಕೃಷಿ ಸಂವಾದ ಹಾಗೂ ನವಚೇತನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಜಿಲ್ಲಾ ಪಂಚಾಯಿತಿ ಸದಸ್ಯ ಚಂದ್ರನಾಯ್ಕ ಕಾರ್ಯಕ್ರಮ ಉದ್ಘಾಟಿಸಿದರು. ಭಾರತೀಯ ಕಿಸಾನ್ ಸಂಘದ ಉತ್ತರ ಪ್ರಾಂತದ ಉಪಾಧ್ಯಕ್ಷ ಎಸ್.ಎಸ್.ಎತ್ತಿನಮನಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ರಾಸಾಯನಿಕ ಗೊಬ್ಬರ, ಕೀಟನಾಶಕಗಳ ಅತಿಯಾದ ಬಳಕೆಯಿಂದ ಭೂಮಿಯ ಸಾರ ಕಳೆದು ಹೋಗುತ್ತಿದೆಯಲ್ಲದೇ ಮನುಷ್ಯನ ಆರೋಗ್ಯ ಹಾಗೂ ಪರಿಸರದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ ಎಂದರು.

ತಿಪಟೂರು ಬೈಫ್ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮುಖ್ಯ ಕಾರ್ಯಕ್ರಮ ಸಂಯೋಜಕ ಸಿ. ದೊರೆಸ್ವಾಮಿ ಮಾತನಾಡಿದರು. ಕಾರ್ಮೆಲ್ ಸೇವಾ ಸದನದ ನಿರ್ದೇಶಕ ಫಾ.ವಿಲಿಯಂ ಮಿರಾಂಡ ಸಾನ್ನಿಧ್ಯ ವಹಿಸಿದ್ದರು.

ಗ್ರಾ.ಪಂ. ಅಧ್ಯಕ್ಷ ಎಚ್. ಮಲ್ಲಿಕಾರ್ಜುನ ಅಧ್ಯಕ್ಷತೆ ವಹಿಸಿದ್ದರು. ತಾ.ಪಂ. ಸದಸ್ಯ ಜಯಾನಾಯ್ಕ, ಸ್ಥಳೀಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ ವ್ಯವಸ್ಥಾಪಕ ಶಿವಚಂದ್ರ ಶ್ರೀನಿವಾಸ ಸಾಗಿ, ಪಶು ಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಬಿ.ಎಲ್. ಪರಮೇಶ್ವರನಾಯ್ಕ, ಬೈಫ್ ಸಂಸ್ಥೆ ಬಳ್ಳಾರಿ ಯೋಜನಾಧಿಕಾರಿ ಎಸ್.ಎಸ್ ಮದುಗುಣಕಿ ಉಪಸ್ಥಿತರಿದ್ದರು. ಸಿರಿ ಸಮೃದ್ಧಿ ಬಳಗದ ಸುಮಾರು 150 ಕ್ಕೂ ಅಧಿಕ ಸದಸ್ಯರು ಭಾಗವಹಿಸಿದ್ದರು.

LOKADHARSHANA – 24/3/06




ಹೂವಿನ ಹಡಗಲಿ ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ,ಕಾರ್ಮೆಲ್ ಜ್ಯೋತಿ ಎನ್.ಜಿ.ಓ.ಆಶ್ರಯದಲ್ಲಿ ಆಸ್ಕಾಡ್ ಯೋಜನೆ ಅಡಿಯಲ್ಲಿ ಜಾನುವಾರುಗಳ ರೋಗ ನಿಯಂತ್ರಣ ಜಾಗೃತಿ ಶಿಬಿರ ಪ.ಪಂ.ಅಧ್ಯಕ್ಷ ಯಮನೂರಪ್ಪ ಉದ್ಘಾಟಿಸಿದರು.ಚಿತ್ರದಲ್ಲಿ ವಿಲಿಯಂ ಮಿರಾಂದ,ಇ.ಓ.ಶಿವಪ್ಪ,ಪರಮೇಶ್ವರನಾಯ್ಕ ಇತರರಿದ್ದಾರೆ.

SANGEVANI – 3/8/2005

## ಶ್ರವಣ ದೋಷ ಪರೀಕ್ಷಾ ಶಿಬಿರ

(ಒಂದನೇ ಪುಟದಿಂದ)
ಉಚಿತವಾಗಿ ಕೊಡುವ ವ್ಯವಸ್ಥೆ ಮಾಡಲಾಗಿದೆ.

ಶಿಬಿರಕ್ಕೆ ಬರುವ ಫಲಾನುಭವಿಗಳು ಪಾಸ್‌ಪೋರ್ಟ್ ಸೈಜಿನ ಎರಡು ಪೋಟೋ ಮತ್ತು 50 ಸಾವಿರ ರೂ., ಒಳಗಿನ ಆದಾಯ ಪ್ರಮಾಣಪತ್ರ ತರುವಂತೆ ಸಂಘಟಕರು ಸೂಚಿಸಿದ್ದಾರೆ.

ಶ್ರವಣ ದೋಷವುಳ್ಳವರು ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕೆಂದು ಕಾರ್ಮೆಲ್ ಸೇವಾ ಸದನದ ನಿರ್ದೇಶಕ ವಿಲಿಯಂ ಮಿರಾಂಡ ಅವರು ಹಡಗಲಿ ಮತ್ತು ಹ.ಬೊ.ಹಳ್ಳಿ ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಕಾಡುತ್ತಿದೆ.

## ೬ ರಂದು ಹಡಗಲಿಯಲ್ಲಿ ಶ್ರವಣ ದೋಷ ಪರೀಕ್ಷಾ ಶಿಬಿರ

ಹೂವಿನಹಡಗಲಿ, ಆ.೩-ಕಾರ್ಮೆಲ್ ಜ್ಯೋತಿ ಎನ್.ಜಿ.ಓ. ಜಿಲ್ಲಾ ಅಂಗವಿಕಲರ ವಸತಿ ಕೇಂದ್ರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಸಾರ್ವಜನಿಕ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ 6-8-2005 ರಂದು ಶ್ರವಣ ದೋಷ ಪರೀಕ್ಷಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

6 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಶ್ರವಣತಜ್ಞ ವೈದ್ಯರಿಂದ ಹಡಗಲಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ತಾಲೂಕಿನ ಶಿಬಿರದಲ್ಲಿ ಅರ್ಹರನ್ನು ಗುರ್ತಿಸಿ ಸಲಕರಣೆಗಳನ್ನು

(ಕೊನೆ ಪುಟ ನೋಡಿ)

UDAYAVAANI – 9/8/2005




ಹೂವಿನಹಡಗಲಿ ಕಾರ್ಮೇಲ್ ಜ್ಯೋತಿ ಎನ್‌ಜಿಓ ವತಿಯಿಂದ ಶ್ರವಣ ದೋಷ ತಪಾಸಣಾ ಶಿಬಿರ ಮತ್ತು ಸಲಕರಣೆ ವಿತರಣೆ ಸಮಾರಂಭವನ್ನು ಜಿಲ್ಲಾ ಅಂಗವಿಕಲ ಮುಖ್ಯಸ್ಥ ಹೇಮರೆಡ್ಡಿ ಉದ್ಘಾಟಿಸಿದರು. ಸಮಾರಂಭದಲ್ಲಿ ಫಾದರ್ ಸಿಟ್ರಿಯನ್ ನಿವೃತ್ತ ವೈದ್ಯಾಧಿಕಾರಿ ಡಾ.ಮಲ್ಲಿಕಾರ್ಜುನಗೌಡ ಮತ್ತಿತರರು ಉಪಸ್ಥಿತರಿದ್ದರು.

…DARSHANA – 6/8/2005

## ಸೋಗಿ: ಟೈಲರಿಂಗ್ ತರಬೇತಿ ಆರಂಭ

ಹೂವಿನ ಹಡಗಲಿ ಆ.5-ಇಲ್ಲಿನ ಕಾರ್ಮೆಲ್ ಜ್ಯೋತಿ ಎನ್.ಜಿ.ಓ. ವತಿಯಿಂದ ತಾಲೂಕಿನ ಸೋಗಿ ಗ್ರಾಮದಲ್ಲಿ ಉಚಿತ ಟೈಲರಿಂಗ್ ತರಬೇತಿ ಕೇಂದ್ರವನ್ನು ಈಚೆಗೆ ಆರಂಭಿಸ ಲಾಯಿತು.

ಈ ಸಂದರ್ಭದಲ್ಲಿ ಕಾರ್ಮೆಲ್ ಸೇವಾ ಸದನದ ನಿರ್ದೇಶಕ ಫಾ|ವಿಲಿಯಂ ಮಿರಾಂದ ಮಾತನಾಡಿ ಹಳ್ಳಿಗಳಲ್ಲಿ ಮಹಿಳೆಯರಿಗೆ ಉದ್ಯೋಗವನ್ನುಕಲ್ಪಿಸಿ ಇನ್ನೊಬ್ಬರ ಹಂಗಲ್ಲಿ ಜೀವಿಸದೇ ಸ್ವಂತವಾಗಿ ದುಡಿದು ಜೀವನ ಸಾಗಿಸಲು ಅನುಕೂಲ ಮಾಡುವುದೆ ಈ ತರಬೇತಿಯ ಉದ್ದೇಶವಾಗಿದೆ ಎಂದರು.

ಟೈಲರಿಂಗ್ ತರಬೇತಿ ಉದ್ಘಾಟಿಸಿದ ಜಗದೀಶ ಮಾತನಾಡಿ ಮಹಿಳೆಯರು ಕಾರ್ಮೆಲ್ ಸಂಸ್ಥೆಯಿಂದ ದೊರೆತ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದರು.

ಆರಂಭದಲ್ಲಿ ಕು|ಗಿರಿಜ ಪ್ರಾರ್ಥನೆ ನಂತರ ಮಲ್ಲಿಕಾರ್ಜುನ ಸ್ವಾಗತಿಸಿ,ನಿರೂಪಿಸಿದರು. ಈ ತರಬೇತಿ ಪಡೆಯುವ 18 ಮಹಿಳೆಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

LOKADARSHANA – 6/8/2005

## ಹೂವಿನ ಹಡಗಲಿಯಲ್ಲಿಂದು ಶ್ರವಣ ದೋಷ ಪರೀಕ್ಷಾ ಶಿಬಿರ

ಹೂವಿನ ಹಡಗಲಿ ಆ.5-ಇಲ್ಲಿನ ಕಾರ್ಮೆಲ್ ಜ್ಯೋತಿ ಎನ್.ಜಿ.ಓ. ಜಿಲ್ಲಾ ಅಂಗವಿಕಲರ ವಸತಿ ಕೇಂದ್ರ,ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಸಾರ್ವ ಜನಿಕ ಆಸ್ಪತ್ರೆ ಇವರ ಆಶ್ರಯದಲ್ಲಿ ಆ.6ರಂದು ಶ್ರವಣ ದೋಷ ಪರೀಕ್ಷಾ ಶಿಬಿರವನ್ನು ಏರ್ಪಡಿಸಲಾಗಿದೆ.

6ರಂದು ಬೆ.10ರಿಂದ ಸಂಜೆ 4ರವರೆಗೆ ಶ್ರವಣ ತಜ್ಞ ವೈದ್ಯರಿಂದ ಹೂವಿನ ಹಡಗಲಿ ಸಾರ್ವಜನಿಕ ಆಸ್ಪತ್ರೆಯಲ್ಲಿ ತಾಲೂಕಿನ ಶಿಬಿರದಲ್ಲಿ ಅರ್ಹರನ್ನು ಗುರ್ತಿಸಿ ಸಲಕರಣೆ ಗಳನ್ನು ಉಚಿತವಾಗಿ ಕೊಡುವ ವ್ಯವಸ್ಥೆ ಮಾಡಲಾಗಿದೆ.

ಶಿಬಿರಕ್ಕೆ ಬರುವ ಫಲಾನುಭವಿಗಳು ಪಾಸಣಪೋರ್ಟ್ ಸೈಜಿನ ಎರಡು ಫೋಟೋ ಮತ್ತು 50 ಸಾವಿರ ರೂ.ಒಳಗಿನ ಆದಾಯ ಪ್ರಮಾಣ ಪತ್ರ ತರುವಂತೆ ಸಂಘಟಿಕರು ಸೂಚಿಸಿದ್ದಾರೆ.

ಶ್ರವಣ ದೋಷವುಳ್ಳವರು ಶಿಬಿರದ ಸದುಪಯೋಗ ಪಡೆದು ಕೊಳ್ಳ ಬೇಕೆಂದು ಕಾರ್ಮೆಲ್ ಸೇವಾ ಸದನದ ನಿರ್ದೇಶಕ ವಿಲಿಯಂ ಮಿರಾಂದ ಅವರು ಹೂವಿನ ಹಡಗಲಿ,ಹ.ಬೊ.ಹಳ್ಳಿ ಮನವಿ ಮಾಡಿಕೊಂಡಿದ್ದಾರೆ.

KANNADA PRABHA – 18/8/2005

## ಸೋಗಿ: ಟೈಲರಿಂಗ್ ಉಚಿತ ತರಬೇತಿ ಕೇಂದ್ರ ಪ್ರಾರಂಭ

ಹೂವಿನಹಡಗಲಿ: ಇಲ್ಲಿನ ಕಾರ್ಮೆಲ್ ಜ್ಯೋತಿ ವತಿಯಿಂದ ಸೋಗಿ ಗ್ರಾಮದಲ್ಲಿ ಟೈಲರಿಂಗ್ ಉಚಿತ ತರಬೇತಿ ಕೇಂದ್ರ ಪ್ರಾರಂಭಿಸಲಾಯಿತು. ಕಾರ್ಮೆಲ್ ಸೇವಾ ಸದನದ ನಿರ್ದೇಶಕ ಫಾ. ವಿಲಿಯಂ ಮಿರಾಂದ, ಮಹಿಳೆಯರ ಸ್ವಾವಲಂಬಿ ಜೀವನಕ್ಕೆ ಟೈಲರಿಂಗ್ ಸಹಕಾರಿಯಾಗಲಿದೆ. ಇದರಿಂದ ತಮ್ಮ ಬದುಕಿಗೆ ನೆಲೆ ಕಂಡುಕೊಂಡು ಆರ್ಥಿಕವಾಗಿ ಸಬಲರಾಗುವಂತೆ ಅವರು ಮಹಿಳೆಯರಿಗೆ ಸಲಹೆ ನೀಡಿದರು. ಜಗದೀಶ್ ತರಬೇತಿ ಕೇಂದ್ರ ಉದ್ಘಾಟಿಸಿದರು. ತರಬೇತಿ ಪಡೆಯಲು ಸುಮಾರು 18ಕ್ಕೂ ಹೆಚ್ಚು ಮಹಿಳೆಯರು ಉಪಸ್ಥಿತರಿದ್ದರು.